ಅಸಲು ದಾವಾ ಸಂ. 217 ಃ 2014

ಪಿ.ಡಬ್ಲ್ಯೂ. 1

ಪ್ರಃಮಾಃದಿಃ 27-02-2017.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಶ್ರೀ ಎನ್ ಎಸ್ ಎಂ ವಕೀಲರಿಂದಃ-

ನಾನು 5ನೇ ತರಗತಿವರೆಗೆ ಓದಿರುತ್ತೇನೆ. ದಾವಾ ಸ್ವತ್ತು 9 ಎಕರೆ 21 ಗುಂಟೆ ಬರುತ್ತದೆ. ಮೂಲತಹ ಕುಂದೂರಪ್ಪ ಎಂಬುವವರಿಗೆ ಸೇರಿರುತ್ತದೆ. ಅವರಿಗೆ 2 ಜನ ಗಂಡು ಮಕ್ಕಳು ಮೊದಲನೆಯವರು ಯಲ್ಲಪ್ಪ 2ನೇಯವರು ಗೋಣೆಪ್ಪ. ಯಲ್ಲಪ್ಪನಿಗೆ ದಾಸಪ್ಪ, ಪಕ್ಕೀರಪ್ಪ, ಬಸಪ್ಪ ಮತ್ತು ಬಿಸ್ತಪ್ಪ ಅಂತ 4 ಜನ ಮಕ್ಕಳು. ಗೋಣೆಪ್ಪ ಇವರಿಗೆ 4 ಜನ ಗಂಡು ಮಕ್ಕಳು ಮತ್ತು ನಮ್ಮ ಅಮ್ಮ ಸೇರಿ 5 ಜನ. ಮೂಕಪ್ಪ, ಪರಶುರಾಮಪ್ಪ, ಮಲ್ಲಪ್ಪ, ನನ್ನ ತಾಯಿ ಗೌರಮ್ಮ, ಹನುಮಂತಪ್ಪ 5 ಜನ ಮಕ್ಕಳು ಇರುತ್ತಾರೆ. ಹನುಮಂತಪ್ಪನಿಗೆ ಗೋಣೆಪ್ಪ, ಪಕ್ಕೀರಪ್ಪ ಮತ್ತು ಕುಂದೂರಪ್ಪ ಮಕ್ಕಳು ಎಂದರೆ ಸರಿಯಲ್ಲ. ಹನುಮಂತಪ್ಪನಿಗೆ ಇಬ್ಬರೇ ಮಕ್ಕಳು ಹನುಮಂತಪ್ಪ ಮತ್ತು ಸಿದ್ದಪ್ಪ. ಸರ್ವೆ ನಂ.22 ರಲ್ಲಿ 10 ಎಕರೆ ಇತ್ತು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ 4ವರೆ ಎಕರೆ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಸರ್ವೆ ನಂ.68 ರಲ್ಲಿ 4 ಎಕರೆ 30 ಗುಂಟೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.68 ರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಸರ್ವೆ ನಂಬರ್‌ಗಳು ನನ್ನ ತಾಯಿ ಅಜ್ಜ ಕುಂದೂರಪ್ಪ ಇವರಿಗೆ ಸಂಬಂದಪಟ್ಟಿದ್ದು ಎಂದರೆ ಗೊತ್ತಿಲ್ಲ. ಯಲ್ಲಪ್ಪನಿಗೆ ಸರ್ವೆ ನಂ.23 ರಲ್ಲಿ 9 ಎಕರೆ 21 ಗುಂಟೆ ಬಂತು ಎಂದರೆ ಸರಿಯಲ್ಲ. ಗೋಣೆಪ್ಪ ಇವರಿಗೆ ಸರ್ವೆ ನಂ.68 ಮತ್ತು 22 ರಲ್ಲಿ ಬಂತು ಎಂದರೆ ಸರಿ. ಯಲ್ಲಪ್ಪನು ಜಮೀನನ್ನು ಉಳಿಸಿಕೊಂಡ ಎಂದರೆ ಸರಿಯಲ್ಲ. ಅವರಿಗೆ ಹಿಸ್ಸೆಗೆ ಬಂದಿದ್ದ ಜಮೀನನ್ನು ಮಾರಾಟ ಮಾಡಿಕೊಂಡಿದ್ದಾರೆ. ನಿಪಿ-1 ರಿಂದ 6 ರ ದಾಖಲೆಗಳನ್ನು ಸರಿ ಇರುತ್ತವೆ ಅಂತ ದಾಖಲಿಸಿರುತ್ತೇನೆ. ಸದರಿ ದಾಖಲೆಗಳಲ್ಲಿ ಯಲ್ಲಪ್ಪನ ಸಂತತಿಯವರು ಮಾರಿದ ದಾಖಲೆಗಳು ಎಂದರೆ ಸರಿ. ಗೋಣೆಪ್ಪನ ಸಂತತಿಯವರು 3 ಎಕರೆ 10 ಗುಂಟೆ ಸರ್ವೆ ನಂ.23 ರಲ್ಲಿ ಮಾರಾಟ ಮಾಡಿರುವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ತಾಃ 12.6.1972 ರಂದು ಸರ್ವೆ ನಂ.22-3 ರಲ್ಲಿ 4 ಎಕರೆ 30 ಗುಂಟೆಯನ್ನು ಪರಶುರಾಮಪ್ಪ ತಂದೆ ಗೋಣೆಪ್ಪ ಇವರು ವೀರಪ್ಪ ತಂದೆ ಕಡ್ಲೆಪ್ಪರ ಮಲ್ಲಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಪರಶುರಾಮಪ್ಪ ಇವರು ನನ್ನ ತಾಯಿಯ ಅಣ್ಣ ಎಂದರೆ ಸರಿ. ಸದರಿ ಜಮೀನು ಗೋಣೆಪ್ಪ ಇವರಿಗೆ ಸಂಬಂದಪಟ್ಟಿದ್ದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅವರು ಸ್ವಂತಕ್ಕೆ ತೆಗೆದುಕೊಂಡಿದ್ದಾರೋ ಅಥವಾ ಅವರ ಕುಟುಂಬದ್ದೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ.68 ರಲ್ಲಿ 34 ಗುಂಟೆಯನ್ನು ಗಂಗಮ್ಮ ಗಂಡ ಗೋಣೆಪ್ಪ ಇವರು ಮರಿಗೌಡರ ರುದ್ರಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿ ಗಂಗಮ್ಮನ ಗಂಡ ಗೋಣೆಪ್ಪ ಇವರಿಗೆ ಸೇರಿದ್ದಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅದು ಇನ್ನೊಬ್ಬ ಅಣ್ಣತಮ್ಮಂದಿರಿಗೆ ಸೇರಿದ ಆಸ್ತಿ ಎನ್ನುತ್ತಾರೆ. ನನ್ನ ತಂದೆ 30.9.1959 ರಂದು 23 ಮುಕ್ಕಾಲು ಗುಂಟೆ ಜಮೀನನ್ನು ಸರ್ವೆ ನಂ.23 ರಲ್ಲಿ ಹನುಮಂತಪ್ಪ ಬಿನ್ ದಾಸಪ್ಪ ಇವರಿಂದ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ. ದಾಸಪ್ಪ ಎಂಬುವವರು ಯಲ್ಲಪ್ಪನ ಮಗ ಎಂದರೆ ಸರಿ. ನನ್ನ ತಂದೆ ಕೊಂಡುಕೊಂಡಿರುವ ಜಮೀನು ಯಲ್ಲಪ್ಪ ತನಗೆ ಬಂದ ಹಿಸ್ಸಾ ಬಾಬ್ತು ಕೊಟ್ಟಿದ್ದಾರೆ ಎಂದರೆ ಸರಿ. ತಾಃ 7.5.1973 ರಲ್ಲಿ ಹನುಮಂತಪ್ಪ ಬಿನ್ ದಾಸಪ್ಪ ಇವರು ವೀರಪ್ಪ ತಂದೆ ಕಡೆಮನಿ ನಿಂಗಪ್ಪ ಎಂಬುವವರಿಗೆ ಸರ್ವೆ ನಂ.23 ರಲ್ಲಿ 22 ಗುಂಟೆಯನ್ನು ಖರೀದಿಗೆ ಕೊಟ್ಟಿದ್ದಾರೆ ಎಂದರೆ ಸರಿ. ಬಿಸ್ಟಪ್ಪ ಇವರ ಹಿಸ್ಸೆಗೆ ಬಂದ ಜಮೀನು ಸರ್ವೆ ನಂ.23 ರಲ್ಲಿ 1 ಎಕರೆ 5 ಗುಂಟೆಯನ್ನು ಕರಿಯಪ್ಪ ತಂದೆ ಬಂಗ್ಲಿ ರಂಗಪ್ಪ ಎಂಬುವವರಿಗೆ

ಮಾರಾಟ ಮಾಡಿದ್ದಾರೆ ಎಂದರೆ ಸರಿ. 14.2.1977 ರಲ್ಲಿ ಹನುಮಂತಪ್ಪ ತಂದೆ ಕುಂದೂರಪ್ಪ ದಾಸಪ್ಪ ಇವರು ಪರಮೇಶ್ವರಪ್ಪ ತಂದೆ ರಾಮಪ್ಪ ಇವರಿಗೆ 1 ಎಕರೆ 6 ಗುಂಟೆ ಸರ್ವೆ ನಂ.23 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದು ಬಸಪ್ಪನ ಹಿಸ್ಸೆ ಎಂದರೆ ಸರಿ. 19-6-1967 ರಲ್ಲಿ ಪಕ್ಕೀರಪ್ಪ ತಂದೆ ಯಲ್ಲಪ್ಪ ಮತ್ತು ಹನುಮಂತಪ್ಪ ತಂದೆ ದಾಸಪ್ಪ ಇವರು ಸರ್ವೆ ನಂ.23 ರಲ್ಲಿ 1 ಎಕರೆ 5 ಗುಂಟೆಯನ್ನು ರಾಮಪ್ಪ ತಂದೆ ಪಕ್ಕೀರಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಇದು ಯಲ್ಲಪ್ಪನ ಮಗ ಪಕ್ಕೀರಪ್ಪನ ಹಿಸ್ಸೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. 19-12-1968 ರಲ್ಲಿ ಸರ್ವೆ ನಂ.23 ರಲ್ಲಿ 3 ಎಕರೆ ಜಮೀನನ್ನು ಹನುಮಂತಪ್ಪ ತಂದೆ ದಾಸಪ್ಪ ಇವರು ಜಂಬಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಇದೆಲ್ಲಾ ಯಲ್ಲಪ್ಪನ ಹಿಸ್ಸೆ ಬಾಬ್ತು ಎಂದರೆ ಸರಿಯಲ್ಲ. ಗೋಣೆಪ್ಪನ ಹಿಸ್ಸೆಗೆ ಬಂದಿರುತ್ತದೆ. ಇದೆಲ್ಲಾ ಯಲ್ಲಪ್ಪನ ಹಿಸ್ಸೆಗೆ ಬಂದ ಆಸ್ತಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಲ್ಲಪ್ಪ ಮತ್ತು ಗೋಣಪ್ಪನ ಹಿಸ್ಸೆಗೆ ಬಂದ ಆಸ್ತಿಗಳು ಎನ್ನುತ್ತಾರೆ. ಯಲ್ಲಪ್ಪನ ವಾರಸುದಾರರೇ ಅವರವರ ಹಿಸ್ಸೆಗೆ ಬಂದಿದ್ದನ್ನು ಮಾರಾಟ ಮಾಡಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಿದೆ

ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾಳಿ